ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ತಾವು ವಿದೇಶಕ್ಕೆ ಹೋಗಿ ಅಲ್ಲಿ ಎಲ್ಲಾ ನೋಡಿದ್ದೀರಿ. ಅಲ್ಲಿರುವಂತೆ ಇಲ್ಲೂ ಅದೇ ರೀತಿಯಲ್ಲಿ ಉತ್ತಮಸ್ಥಿತಿಗೆ ತರುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಾಧ್ಯವಿದೆ. ಅಲ್ಲಿ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಿದ್ದಾರೆ. ಹಾಗೆ ನಾವು ಮಾಡುವುದಕ್ಕೆ ನಮ್ಮಲ್ಲಿ ಸಾಕಾದಷ್ಟು ದುಡ್ಡಿಲ್ಲ, ದುಡ್ಡಿದ್ದರೆ ಕೇಬಲ್ಸ್ ಇಲ್ಲ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಬೇಕಾದಷ್ಟು ಖರ್ಚುಮಾಡುತ್ತಿದ್ದೀವೆಂದು ಹೇಳುವಾಗ ಹಣವೇಕಿಲ್ಲ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಲು 90 ಲಕ್ಷ ರೂಪಾಯಿಗಳ ಯೋಜನೆ ತಯಾರುಮಾಡಿದರೂ ಖರ್ಚುಮಾಡಲು ಸಾಕಷ್ಟು ಹಣ ದೊರೆಯಲಿಲ್ಲ ಮತ್ತು ಕೇಬಲ್ಸ್ ಸಿಕ್ಕುವುದಿಲ್ಲ.

ಶ್ರೀ ಜಿ. ಎ. ಆಚಾರ್ಯರು.—ವಿದೇಶ ಯಾತ್ರೆಯಿಂದ ಇನ್ನುಮುಂದಾದರೂ ಟಕ್ನಿಕಲ್ ಡಿಫೆಕ್ಟ್ ಇದೆಯೆಂಬುದು ನಿಮಗೆ ಗೊತ್ತಾಯಿತು. ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುವುದು ಒಳ್ಳೆಯದಾದ್ದರಿಂದ ಬಡಾವಣೆಯೋಜನೆ ಮಾಡುವಾಗಲಾದರೂ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಲು ಏನಾದರೂ ಅವಕಾಶ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ವಿದೇಶ ಯಾತ್ರೆಯಿಂದ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುವುದು ಒಳ್ಳೆಯದೆಂದು ಗೊತ್ತಾಯಿತೆಂದು ಹೇಳುವುದು ಸರಿಯಲ್ಲ. ಮೊದಲೇ ಅದು ಗೊತ್ತಿತ್ತು. ಆದರೆ ಸಾಮಾನು ಸಿಕ್ಕುವುದಿಲ್ಲ. ಮತ್ತು ಇನ್ನು ಮುಂದೆ ಬಡಾವಣೆಮಾಡುವುದಕ್ಕೆ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುತ್ತೇವೆಂದು ಹೇಳಿದರೆ ಹೆಚ್ಚು ಕಾಲಾವಧಿ ಬೇಕಾಗುತ್ತದೆ. ಸಾಮಾನ್ಯವಾಗಿ ತೊಂದರೆಯಾಗದಂತೆ ನೋಡಿ ಹಾಕಬೇಕಾಗುತ್ತದೆ. ಈಗ ಒಂದು ಕಡೆ ದೀಪಬೇಕು, ಪಂಪ್‌ಬೇಕು ಎಂದು ಯಾರಾದರೂ ಕೇಳಬಹುದು. ಆಗ ಅವರಿಗೆ ಅಂಡರ್‌ಗ್ರೌಂಡ್ ಕೇಬಲ್ಸ್ ಬರುವವರೆಗೆ ಕಾಯಬೇಕೆಂದು ಹೇಳಿದರೆ ಅದು ಬರುವುದಕ್ಕೆ ಎರಡು ವರ್ಷಗಳು ಕಾಯಬೇಕಾಗಬಹುದು. ಆದ್ದರಿಂದ ಎರಡು ವರ್ಷಗಳು ಸುಮ್ಮನಿರಿ ಎಂದು ಅವರಿಗೆ ಹೇಳುವುದು ಹೇಗೆ? ಅದನ್ನು ತಾವು ಯೋಚನೆಮಾಡಿ.

ಶ್ರೀ ಜಿ. ಎ. ಆಚಾರ್ಯರು.—ಅಪಾಯಕರವೆಂದು ತಿಳಿದಮೇಲೂ ಕೂಡ ಹಾಗೆ ಮಾಡುವುದು ತಪ್ಪಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಂಟರಪ್ಷನಿಂದ ತೊಂದರೆ, ಅಷ್ಟೆ. ಅಪಾಯದ ಪ್ರಶ್ನೆ ಇಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಹಾಕಿ ಟೀಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Does it represent the true state of affairs?

The Hon'ble Sri K. T. BHASHYAM.—It does not represent the true state of affairs in entirety. To some extent it represents the truth.

Sri K. SAMPANGIRAMIAH.—It was stated in a cartoon somewhere that even if a person sneezes the wires would snap. Is that so?

The Hon'ble Sri K. T. BHASHYAM.—I do not know. Either the wire must be too delicate that it snaps at a person sneezing or the sneezing is perhaps too powerful. Anyway I have not come across any such instances.

Mr. SPEAKER.—The Hon'ble Minister for Revenue and the Hon'ble Home Minister are not here.

Appointments of Lecturers, Professors and Assistant Professors.

Q.—173. Sri K. R. SREEKANTESWAR (Bangalore City—General).—

Will the Government be pleased to state :—

(*a*) how many Lecturers, Professors and Assistant Professors have been appointed during the last four years ;

(*b*) whether before making these appointments, the claims of those already on the staff were taken into consideration ;

(*c*) whether it is not a fact that in making these appointments the claims of some of the senior members of the staff have been overlooked ;

(*d*) whether in respect of these appointments merit was, at least, one of the considerations ?

A.—The Hon'ble Sri R. CHENNIGARAMIAH (Minister for Local Self-Government).—

(*a*) Lecturers ... 195
Professors ... 18
Assistant Professors. 75

(*b*) The appointments of Lecturers are made in accordance with the Rules of Recruitment.

Vacancies of Professors are advertised. The claims of those that apply for the posts advertised are considered.

Yes. In the cases of vacancies of Assistant Professors.

(*c*) The claims of all concerned have been considered and appointments made.

(*d*) Yes.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಲೆಕ್ಚರರುಗಳು ಮತ್ತು ಅಸಿಸ್ಟೆಂಟ್ ಪ್ರೊಫೆಸರುಗಳನ್ನು ನೇಮಕಮಾಡುವಾಗ ಮತ್ತು ಅವರಿಗೆ ಬಡ್ತಿಕೊಡುವಾಗ ಕೆಲವು ನಿಬಂಧನೆಗಳಿಗನುಸಾರವಾಗಿ ಮಾಡಲಾಗುತ್ತದೆಂದು ಹೇಳಿದೆ. ಆ ನಿಬಂಧನೆಗಳಲ್ಲಿ ಕೆಲವನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನಿಬಂಧನೆಗಳಿವೆ. ಅವು ಪಬ್ಲಿಕ್ ಡಾಕ್ಯುಮೆಂಟ್. ಅವನ್ನು ತಾವು ನೋಡಬಹುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸಿಗೂ, ವಿಶ್ವವಿದ್ಯಾನಿಲಯದ ರೆಕ್ರೂಟ್‌ಮೆಂಟ್ ರೂಲ್ಸಿಗೂ ಬಹಳ ವ್ಯತ್ಯಾಸವಿದೆಯೆ ? ಎರಡೂ ಒಂದೆಯೋ ಅಥವಾ ಬೇರೆಬೇರೆಯಾಗಿವೆಯೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ಉತ್ತರದಲ್ಲೇ ಹೇಳಿದೆ. ಲೆಕ್ಚರರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು, ಪ್ರೊಫೆಸರುಗಳು ಇವರ ಪೈಕಿ ಯಾರ ವಿಚಾರ ತಾವು ಕೇಳುತ್ತಿರುವುದು ಎಂಬ ತಪಶೀಲನ್ನು ಹೇಳಿದರೆ ಉತ್ತರ ಕೊಡಬಹುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಲೆಕ್ಚರರುಗಳ ವಿಚಾರ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ರಿಕ್ರೂಟ್‌ಮೆಂಟ್ ನಿಬಂಧನೆಗಳಿಗನುಸಾರವಾಗಿ ನೇಮಕಮಾಡಲಾಗುತ್ತದೆಯೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಸಿಸ್ಟೆಂಟ್ ಪ್ರೊಫೆಸರುಗಳನ್ನು ಹಂಗಾಮಿಯಾಗಿ ಪ್ರೊಫೆಸರುಗಳಾಗಿ ಮಾಡಲು ಅವರು ಅರ್ಜಿ ಹಾಕಬೇಕೆ ? ಆ ರೀತಿ ಅರ್ಜಿಹಾಕಿದ್ದರೆ ಅದನ್ನು ಪರಿಗಣಿಸಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಜಾಗಗಳನ್ನು ಅಡ್ವರ್ಟೈಸ್ ಮಾಡುತ್ತಾರೆ. ಸಾರ್ವಜನಿಕರು ಸಹ ಅರ್ಜಿ ಹಾಕಬಹುದು. ಮೆರಿಟ್ಸ್ ನೋಡಿ ಅದರ ಮೇಲೆ ಪರಿಶೀಲಿಸುತ್ತಾರೆ.

ಶ್ರೀ ಕೆ. ಆರ್ ಶ್ರೀಕಂಠೇಶ್ವರ್‌ರವರು.—ಅದರಂತೆ ಪ್ರೊಫೆಸರುಗಳನ್ನು ನೇಮಕ ಮಾಡಿದಾಗ ಎಷ್ಟು ಜನ ಅಸಿಸ್ಟೆಂಟ್ ಪ್ರೊಫೆಸರುಗಳು ಅರ್ಜಿಹಾಕಿದ್ದರೆಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಯಾವಾಗ, ಯಾವ ವರ್ಷ, ಯಾವ ಸೆಲೆಕ್ಷನ್ ಎಂಬುದನ್ನು ತಿಳಿಸಿದರೆ ಹೇಳಬಹುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಈಗ್ಗೆ ನಾಲ್ಕು ವರ್ಷದಲ್ಲಿ 18 ಜನ ಪ್ರೊಫೆಸರುಗಳನ್ನು ನೇಮಕಮಾಡಿದಾಗ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರು ಅರ್ಜಿಹಾಕಿರುತ್ತಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅದನ್ನು ತಾವು ಪರಿಗಣಿಸಿರುತ್ತೀರಾ ? ಹದಿನೆಂಟು ಜನ ಪ್ರೊಫೆಸರುಗಳನ್ನು ನೇಮಕಮಾಡುವಾಗ ಅಸಿಸ್ಟೆಂಟ್ ಪ್ರೊಫೆಸರುಗಳಲ್ಲಿ ಯಾರಾದರೂ ಗಣನೆಗೆ ತೆಗೆದುಕೊಂಡು ನೇಮಕ ಮಾಡಿರುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೌಕರಿಯಲ್ಲಿರುವವರೂ ಮತ್ತು ಬೇರೆಯವರೂ ಅರ್ಜಿಗಳನ್ನು ಹಾಕುತ್ತಾರೆ. ಅಡ್ವರ್ಟೈಸ್ ಮಾಡಿದಾಗ ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದು. ಹೊರಗಿನವರೂ ಸಹ ಅರ್ಹತೆಯಿದ್ದರೆ ಅರ್ಜಿಹಾಕಿಕೊಳ್ಳಬಹುದು. ಹಾಗೆ ಬಂದ ಅರ್ಜಿಗಳಲ್ಲಿ ಮೆರಿಟ್ ಪರಿಶೀಲಿಸಿ ಅರ್ಹರಾದ 18 ಜನರನ್ನು ನೇಮಕಮಾಡಿದೆ.

Mr. SPEAKER.—The Hon'ble Member Sri D. H. Chandrasekharaiya is not present.

The Hon'ble Member Sri S. Rangaramiah is also not present. So the questions put down for the day are over.

(The Hon'ble Home Minister just then entered the Assembly Hall).

Mr. SPEAKER.—Now the Hon'ble Home Minister has come. We can now take up the questions pertaining to his portfolio.

Janab SYED ABDUR RAHMAN.—Will the same concession be extended to the members who were not present at the time their names were called ?

Mr. SPEAKER.—No.

Organising a Horticultural Nursery in Kolar District.

Q.—160. Sri T. RAMACHAR (Kolar District—General).—

Will the Government be pleased to state :—

(*a*) whether there are horticultural nurseries at each district headquarter place in the State ;

(*b*) if the answer to (*a*) is in the affirmative, the names of places where they exist may be given ;

(*c*) if the answer to (*a*) is in the negative, the reasons for the delay in organising such nurseries ?

A.—The Hon'ble Sri T. MARIAPPA (Home Minister).—

(*a*) Yes, with the exception of Kolar District.

(*b*) The names of District Headquarters where Horticultural Nurseries are existing at present are noted below :—

1 Bangalore District: Lalbagh ;
2 Mysore District: Curzon Park and Nurseries in other parks and gardens in Mysore City ;
3 Hassan District ;
4 Shimoga District ;
5 Chikmagalur District ;
6 Chitaldrug District : Iyyanahalli, Chitaldrug Taluk—7 miles from Chitaldrug Headquarters ;
7 Tumkur District ;
8 Mandya District : The nursery hitherto existed in the Horticultural Farm, Maddur, and Daria-Dowlat Bagh, Srirangapatna.

(*c*) The only District where a Horticultural Nursery has not yet come into existence is Kolar. The question of acquisition of lands is still under correspondence with the Deputy Commissioner, Kolar District. He has been reminded to settle the question early.

ಶ್ರೀ ಟಿ. ರಾಮಾಚಾರ್ಯರವರು.—ಕೋಲಾರ ಜಿಲ್ಲೆಯಲ್ಲಿ ಫಲಪುಷ್ಪಗಳ ವ್ಯವಸಾಯದ ಸಂಬಂಧದಲ್ಲಿ ಸಸಿಗಳ ಪಾಲನಾಕ್ಷೇತ್ರವನ್ನು ಏರ್ಪಡಿಸುವ ವಿಷಯದಲ್ಲಿ ಇನ್ನೂ ಪತ್ರವ್ಯವಹಾರ ನಡೆಯುತ್ತಿದೆಯೆಂದು ಹೇಳಿದ್ದೀರಿ. ಅದು ಯಾವ ಸ್ಟೇಜಿನಲ್ಲಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದಷ್ಟು ಬೇಗ ಅಕ್ವೈರ್ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಬರೆದಿದೆ. ಜಮೀನು ಸಿಕ್ಕಿದ ತಕ್ಷಣ ನರ್ಸರಿಯನ್ನು ಪ್ರಾರಂಭಮಾಡುತ್ತೇವೆ.

QUESTIONS FOR ANSWER ON THE DAY.

(*Not taken up*).

Service of Bull Dozers.

Q.—62. Sri K. H. MUDIYAPPA (Chikmagalur District—General).—

Will the Government be pleased to state :—

(*a*) the number of bulldozers belonging to Government ;

(*b*) the number of bulldozers that are working in each district ;